**ಮಗ:** ಅಮ್ಮ, ಹಸು ಹಾಲು ಕೊಡುತ್ತದೆ. ಸರಿನಾ?
**ಅಮ್ಮ:** ಇಲ್ಲ
**ಮಗ:** ಹಸು ಹಾಲು ಕೊಡದೆ ಇನ್ನೇನು ಕೋಣ ಹಾಲು ಕೊಡುತ್ತ?
**ಅಮ್ಮ:** ಹೇ ಹಸು ಹಾಲು ಕೊಡಲ್ಲ ನಾವೇ ಹಿಂಡಿಕೊಳ್ಳಬೇಕು.

***

**ಮಗ:** ಬಿಸಿ ನೀರಿಗೆ ಜೇನುತುಪ್ಪ ಹಾಕಿ, ನಿಂಬೆ ಹಣ್ಣು ಹಿಂಡಿ, ನಾಲ್ಕು ತಿಂಗಳು ಕುಡಿದ್ರೆ ಏನಾಗುತ್ತೆ ಗೊತ್ತ ಅಮ್ಮ?
**ಅಮ್ಮ:** ನಾಲ್ಕು ಕೆಜಿ ನಿಂಬೆ ಹಣ್ಣು, ಒಂದ್ ಕೆ.ಜಿ. ಜೇನುತುಪ್ಪ ಖಾಲಿಯಾಗ್ತದೆ ಅಷ್ಟೆ.

***

**ಅಮ್ಮ:** ಮನು ಇಲ್ನೋಡೊ. ಹಸು ತಲೇನಾ ಕೆಳಕ್ ಮಾಡ್ಕೊಂಡ್, ಕಾಲ್ನ ಮೇಲ್ಕೆ ಮಾಡ್ಕೊಂಡ್ ಮಲ್ಗೈತೆ.
**ಮನು:** ಮೋ.. ಅದು ನಂದಿನಿ ಹಾಲಿನ ಜಾಹೀರಾತು! ಫಸ್ಟು ಪೇಪರ್‌ನ ನೆಟ್ಗೆ ಹಿಡ್ಕೊ. ಉಲ್ಟಾ ಹಿಡ್ಕೊಂಡ್ರೆ ಹಾಗೇ ಕಾಣೋದು.

***

**ಅಮ್ಮ:** ಹಾಲ್ ಕುಡಿದ್ರೆ ಬೆಳ್ಳಾಗ್ತಾರಾ?
**ಮನು:** ಹುಂ. ಅದ್ರಲ್ಲಿ ಕ್ಯಾಲ್ಸಿಯಂ, ಪ್ರೊಟೀನ್ಸ್ ಇರುತ್ತೆ. ಗಟ್ಟಿನೂ ಆಗ್ತಾರೆ. ಬೆಳ್ಗೂ ಆಗ್ತಾರೆ.
**ಅಮ್ಮ:** ಮತ್ತೆ ನಿನ್ಯಾಕೆ ಕರ್ಗೆ ಇದ್ದೀಯ?

***

**ಗೆಳೆಯ:** ಓ ದೇವ್ರೆ, ಎರಡ್ ವರ್ಷ ಆದ್ಮೇಲೆ ಹಲ್ಲು ಕೊಟ್ಟೆ, ಆರು ವರ್ಷ ಆದ್ಮೇಲೆ ನಡೆಯೋಕೆ ಬಿಟ್ಟೆ, ಹದಿನೈದು ವರ್ಷಕ್ಕೆ ಗಡ್ಡಮೀಸೆ ಕೊಟ್ಟೆ...
**ಮನು:** ಇವಾಗ್ ಕರೆಕ್ಟ್ ಆಗಿ ಹದಿನೆಂಟ್ ವರ್ಷ ಆಗಿದೆ. ನಿನ್ ಲೆಕ್ಕದ್ ಪ್ರಕಾರ ಏನ್ ಕೊಡ್ಬೇಕು ಅಂತ ನೀನೇ ಹೇಳಪ್ಪ ಇನ್ನಿಗೆ!

***

**ಮನು:** ಒಂದ್ ಹುಡ್ಗಿ ಹತ್ ನಿಮಿಷಕ್ಕೆ ಹತ್ ಚಪಾತಿ ಹೊಸೆದ್ರೆ ಮೂರ್ ಜನ ಹುಡುಗೀರು ಹತ್ ನಿಮಿಷಕ್ಕೆ ಎಷ್ಟು ಚಪಾತಿ ಹೊಸಿತಾರೆ?
**ಅಮ್ಮ:** 10ರಿಂದ 15 ಚಪಾತಿ ಅಷ್ಟೆ.
**ಮನು:** ಅದ್ ಹೇಗೆ?
**ಅಮ್ಮ:** ಮೂರ್ ಜನ ಹುಡುಗೀರು ಒಂದ್ ಕಡೆ ಸೇರ್ಕೊಂಡ್ರೆ ಮಾತಾಡೋಕೆ ಟೈಮೇ ಸಿಗಲ್ಲ ಅಂತದ್ರಲ್ಲಿ 30 ಚಪಾತಿ ಎಲ್ ಹೊಸೆದಾರು?

***

**ಅಮ್ಮ:** ತಗೊಳಪ್ಪ ನಿನ್ ಸಾಲ ನಾಕ್ ಸಾವಿರ.
**ಮನು:** ಇದೇನಿದು. ನಾನ್ ಕೊಟ್ಟಿದ್ದು ನಾಕ್ ಸಾವಿರ, ನೀನ್ ಎರಡ್ ಸಾವಿರ ಕೊಟ್ಟಿದ್ದೀಯ.
**ಅಮ್ಮ:** ನೀನ್ ಈಗ ಎಷ್ಟು ಇಸ್ಕೊಂಡೆ?
**ಮನು:** ಎರಡ್ ಸಾವಿರ.
**ಅಮ್ಮ:** ನಾನ್ ಈಗ ಎಷ್ಟ್ ಕೊಟ್ಟೆ?
**ಮನು:** ಎರಡ್ ಸಾವಿರ
**ಅಮ್ಮ:** ಅಲ್ಲಿಗೆ ಎಷ್ಟ್ ಸಾವಿರ ಆಯ್ತು.
**ಮನು:** ನಾಕ್ ಸಾವಿರ! (ಮನು ಶಾಕ್ ಅಮ್ಮ ರಾಕ್)

***

**ಮನು:** ಅಮ್ಮ... ಅಮ್ಮ... ನಂಗೆ ಅಮೆರಿಕದಲ್ಲಿ ಕೆಲಸ ಸಿಕ್ಕಿದೆ. ನಾನ್ ಅಮೆರಿಕಕ್ಕೆ ಹೋಗ್ತಿನಿ.
**ಅಮ್ಮ:** ಎಲ್ಲಾದ್ರೂ ಹಾಳಾಗ್ ಹೋಗು ಸಾಯಂಕಾಲದ ಹೊತ್ಗೆ ಮನೆಗ್ ಬಾ!

***




**ಅಮ್ಮ:** ಮನು ನಾನು ಇನ್ ಸ್ವಲ್ಪ ದಿನದಲ್ಲೇ ಡಾಕ್ಟ್ರು ಆಗ್ತಿನಿ.
**ಮಗ:** ನೀನಾ...? ಹೇಗೆ?
**ಅಮ್ಮ:** ನಾನ್ ಬರೆದ ಅಕ್ಷರ ನಂಗೆ ಅರ್ಥ ಆಗಲ್ವಲ್ಲ ಅದ್ಕೆ.

***

**ಮಗ:** ಏನಮ್ಮ ನೀನು. ಇಂಗ್ಲಿಷ್ ಕಲಿಬೇಕು ಅಂದೆ. ಅದ್ಕೆ ಟ್ಯೂಷನ್‌ಗೆ ಕಳಿಸಿದ್ರೆ ಅದೂ ಕಲ್ತಿಲ್ಲ.
**ಅಮ್ಮ:** ಅಮೆರಿಕದವ್ರಿಗೆ ಕನ್ನಡ ಬರುತ್ತಾ?
**ಮಗ:** ಇಲ್ಲ
**ಅಮ್ಮ:** ಹಂಗೆ ನಂಗೂ ಇಂಗ್ಲಿಷ್ ಬರಲ್ಲ

***

**ಗುಂಡ:** ಈ ಜಗತ್ತಿನಲ್ಲಿ ದುಡ್ ಕೊಟ್ರೆ ಏನ್ ಬೇಕಾದ್ರೂ ಸಿಗುತ್ತೆ ಅದ್ರೆ...
**ಗುಂಡಿ:** ಕೊಟ್ಟರೋ ದುಡ್ ಮಾತ್ರ ವಾಪಸ್ ಬರಲ್ಲಾ!

ರೀಲ್ಸ್ ಸಂಗ್ರಹ: ವಿಜೆ ಮನೋಜ್ ಅಫೀಶಿಯಲ್ (VJ Manoj Official)

